For more job news visit : www.kpscvaani.com

ನೊ.ಸಂಖ್ಯೆ:37/65-66

ಅಕ್ಕೂರು-ಹೊಸಹಳ್ಳಿ ವಿದ್ಯಾಸಂಸ್ಥೆ
ಅಕ್ಕೂರು-ಹೊಸಹಳ್ಳಿ ಪ್ರೌಢಶಾಲೆ, ಹೊಸಹಳ್ಳಿ
ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಕ್ರಮ ಸಂಖ್ಯೆ: ದಿನಾಂಕ: 02/05/2020

ಬೇಕಾಗಿದ್ದಾರೆ

ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಅಕ್ಕೂರು ಹೊಸಹಳ್ಳಿ ಪ್ರೌಢಶಾಲೆ (ಅನುದಾನಿತ ಪ್ರೌಢಶಾಲೆ) ಹೊಸಹಳ್ಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ, ಈ ಪ್ರೌಢಶಾಲೆಯಲ್ಲಿ ಈ ಕೆಳಕಂಡ 2 ಹುದ್ದೆಗಳು ವಯೋನಿವೃತ್ತಿಯಿಂದ ತೆರವಾಗಿದ್ದು, ನೇರ ನೇಮಕಾತಿ ಮೂಲಕ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಜ್ಞಾಪನಾ ಸಂಖ್ಯೆ: ಸಿ8(6)ಶಾಶಿಅ.ಖಾಹುಭನು/136/2019-20 ದಿನಾಂಕ: 17-03-2020 ರನ್ವಯ ಅನುಮತಿ ದೊರೆತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅಭ್ಯರ್ಥಿಗಳು, ಅರ್ಜಿಗಳನ್ನು ಕಾರ್ಯದರ್ಶಿಗಳು, ಅಕ್ಕೂರು ಹೊಸಹಳ್ಳಿ ವಿದ್ಯಾಸಂಸ್ಥೆ, ಹೊಸಹಳ್ಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ರವರಿಗೆ ಸಲ್ಲಿಸುವುದು. ಇನ್ನೊಂದು ಪ್ರತಿಯನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ ರವರಿಗೆ ಸಲ್ಲಿಸುವುದು. ಪ್ರಚಲಿತ ಸರ್ಕಾರಿ ಆದೇಶದಂತೆ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಪತ್ರಿಕಾ ಪ್ರಕಟಣೆ ದಿನಾಂಕದಿಂದ 21 ದಿವಸದೊಳಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಹುದ್ದೆಗಳ ವಿವರ

ವಿಷಯ	ವಿದ್ಯಾರ್ಹತೆ	ರೋಸ್ಟರ್ ಪ್ರಕಾರ ಮೀಸಲಾಗಿರುವ ಬಿಂದು
1. ಜೀವಶಾಸ್ತ್ರ	ಬಿ.ಎಸ್ಸಿ.ಬಿ.ಇಡಿ (ಸಿ.ಬಿ.ಝಡ್)	ಬಿಂದು-I, ಪರಿಶಿಷ್ಟ ಜಾತಿ
2. ಕಲಾ (ಸಮಾಜವಿಜ್ಞಾನ)	ಬಿ.ಎ.ಬಿ.ಇಡಿ	ಬಿಂದು-II, ಸಾಮಾನ್ಯ ಅಭ್ಯರ್ಥಿ

ಅರ್ಜಿ ಜೊತೆಗೆ ಅರ್ಜಿ ಶುಲ್ಕ ಪರಿಶಿಷ್ಟ ಜಾತಿ ಅಭ್ಯರ್ಥಿಗಳು 500-00 ರೂಪಾಯಿಗಳು, ಸಾಮಾನ್ಯ ಅಭ್ಯರ್ಥಿಗಳು 1000/- ರೂಪಾಯಿಗಳು ಬ್ಯಾಂಕ್ ಹುಂಡಿಯನ್ನು ಕಾರ್ಯದರ್ಶಿಗಳು, ಅಕ್ಕೂರು ಅಕ್ಕೂರು ಹೊಸಹಳ್ಳಿ ವಿದ್ಯಾಸಂಸ್ಥೆ, ಹೊಸಹಳ್ಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಹೆಸರಿನಲ್ಲಿ ಪಡೆದು ಲಗತ್ತಿಸಬೇಕು.

ಸಹಿ/-ಕಾರ್ಯದರ್ಶಿಗಳು
ಅಕ್ಕೂರು ಹೊಸಹಳ್ಳಿ ವಿದ್ಯಾಸಂಸ್ಥೆ, ಹೊಸಹಳ್ಳಿ,
ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
ಮೊಬೈಲ್: 9844000987

For more job news visit : www.kpsvaani.com

ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘ–ಇಂಡಿ

ತಾ: ಇಂಡಿ

ಬೇಕಾಗಿದ್ದಾರೆ

ಜಿ: ವಿಜಯಪುರ

ನಮ್ಮ ಸಂಘದ ಅಧೀನದಲ್ಲಿ ನಡೆಯುತ್ತಿರುವ ಈ ಕೆಳಗಿನ ಅನುದಾನಿತ ಪ್ರೌಢಶಾಲೆಯಲ್ಲಿ ಖಾಲಿಯಿರುವ ಸಹ ಶಿಕ್ಷಕರ ಹುದ್ದೆಗಳಿಗೆ ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರ ಆದೇಶ ಸಂಖ್ಯೆ: ಜಿ12:ಶಾತಿಅ:ಖಾಹುತುಂ:ಅನು:87:2019–20, ದಿನಾಂಕ 21–05–2020ರ ಅನುಮತಿಯೊಂದಿಗೆ ಈ ಕೆಳಗಿನ ಅನುದಾನಿತ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ.

ಅ ನಂ	ಶಾಲೆಯ ಹೆಸರು	ಹುದ್ದೆಯ ವಿವರ	ಅನುಮತಿಸಿದ ವಿಷಯ	ವಿದ್ಯಾರ್ಹತೆ	ಮೀಸಲಾತಿ ಸೂಚ್ಯಂಕ	ಮೀಸಲಾತಿ ಗುಂಪು	ಹುದ್ದೆ ಸಂಖ್ಯೆ	ಮಾಧ್ಯಮ	ವೇತನ ಶ್ರೇಣಿ
1	ಶ್ರೀ ಶಾಂತೇಶ್ವರ ಪ.ಪೂ ಕಾಲೇಜು (ಮಾ.ವಿ) ಇಂಡಿ, ತಾ: ಇಂಡಿ ಜಿ: ವಿಜಯಪುರ	ಸಹ ಶಿಕ್ಷಕರು	ಸಮಾಜ ವಿಜ್ಞಾನ	ಬಿ.ಎ ಬಿ.ಈಡಿ	15ನೇ ಸೂಚ್ಯಂಕ	ಪರಿಶಿಷ್ಟ ಜಾತಿ (ಸಮತಳ –1)	01	ಕನ್ನಡ	33450–62600
2	ಶ್ರೀ.ಅ.ಗು.ಗಾಂಧಿ ಬಾಲಕಿಯರ ಪ್ರೌಢಶಾಲೆ ಇಂಡಿ ತಾ: ಇಂಡಿ, ಜಿ: ವಿಜಯಪುರ	ಸಹ ಶಿಕ್ಷಕರು	ಸಮಾಜ ವಿಜ್ಞಾನ	ಬಿ.ಎ ಬಿ.ಈಡಿ	16ನೇ ಸೂಚ್ಯಂಕ	ಸಾಮಾನ್ಯ ಗ್ರಾಮೀಣ (ಸಮತಳ –3)	01	ಕನ್ನಡ	33450–62600

ಸೂಚನೆಗಳು: ಸರಕಾರದ ನಿಗದಿತ ವಯೋಮಿತಿ ಹಾಗೂ ವಿದ್ಯಾರ್ಹತೆಯುಳ್ಳ ಅರ್ಹ ಅಭ್ಯರ್ಥಿಗಳು ತಮ್ಮ ಎಲ್ಲಾ ಪ್ರಮಾಣ ಪತ್ರಗಳ ನಕಲುಗಳೊಂದಿಗೆ ಅಧ್ಯಕ್ಷರು/ಗೌರವ ಕಾರ್ಯದರ್ಶಿಗಳು ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘ, ಇಂಡಿ ಇವರ ಹೆಸರಿನಲ್ಲಿ 1000=00ರೂ ಡಿ.ಡಿಯೊಂದಿಗೆ ಪ್ರಕಟಣೆಗೊಂಡ 21 ದಿನಗಳೊಳಗಾಗಿ ಅರ್ಜಿಯನ್ನು ಅಧ್ಯಕ್ಷರು/ಗೌರವ ಕಾರ್ಯದರ್ಶಿಗಳು ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘ, ಮಿನಿ ವಿಧಾನಸೌಧದ ಎದುರಿಗೆ, ಹೋಸ್ಟ್–ಇಂಡಿ, ಜಿ: ವಿಜಯಪುರ ಇವರಿಗೆ ತಲುಪುವಂತೆ ಹಾಗೂ ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಯಪುರ ಇವರಿಗೆ ಕಳುಹಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ಇಲಾಖಾ ನಿಯಮದಂತೆ ಸಂದರ್ಶನದ ದಿನಾಂಕವನ್ನು ನಂತರ ಅಂಚೆ ಮೂಲಕ ತಿಳಿಸಲಾಗುವುದು.

ಸ್ಥಳ: ಇಂಡಿ
ದಿನಾಂಕ: 02–06–2020

ಸಹಿ/– ಅಧ್ಯಕ್ಷರು/ಗೌರವ ಕಾರ್ಯದರ್ಶಿಗಳು
ಎಸ್.ಎಸ್.ವಿ.ವಿ. ಸಂಘ ಇಂಡಿ ಜಿ: ವಿಜಯಪುರ

For more job news visit : www.kpscvaani.com

ಕರ್ನಾಟಕ ಪೀಪಲ್ಸ್ ಎಜ್ಯುಕೇಶನ ಸೊಸೈಟಿ (ರಿ), ಕಲಬುರಗಿ

ಡಾ. ಅಂಬೇಡ್ಕರ್ ಸಭಾಗೃಹ, ಪೊಲೀಸ್ ಮೈದಾನ ರಸ್ತೆ, ಕಲಬುರಗಿ – 585105

ಸಂಖ್ಯೆ :ಕ/ಕೆಪಿಎಸೋ/ಖಾಲಿಹುದ್ದೆ ಭರ್ತಿ/2020–21/118 ದಿನಾಂಕ: 02.06.2020

ಅಧಿಸೂಚನೆ

ಕರ್ನಾಟಕ ಪೀಪಲ್ಸ್ ಎಜ್ಯುಕೇಶನ ಸೊಸೈಟಿ ಅಧಿನದಲ್ಲಿ ಬರುವ ಡಾ.ಅಂಬೇಡ್ಕರ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಕಲಬುರಗಿ (ಅನುದಾನಿತ ಪದವಿ ಮಹಾವಿದ್ಯಾಲಯ) ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದವರಿಂದ (ನೇರ ನೇಮಕಾತಿ) ತುಂಬಿಕೊಳ್ಳಲು ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ : ಕಾಶಿಇ/114/ಹೈಕ/ಮೀಸಲಾತಿ/2016–17/ನೇವಿ–2, ದಿನಾಂಕ : 14–06–2019 ಮತ್ತು ಜಂಟಿ–ನಿರ್ದೇಶಕರು, ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ಇವರ ಪತ್ರ ಸಂಖ್ಯೆ : ಕಾಶಿಇ/ಪ್ರಾಕಕ/175/ಹೈಕಸ್ಥವೃ/1/2017–18/118 ದಿನಾಂಕ : 28.05.2020. ರಂದು ಅನುಮತಿ ನೀಡಿರುವ ಪ್ರಯುಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಹುದ್ದೆಗಳು ಅನುಚ್ಛೇದ 371(ಜೆ) ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಅಭ್ಯರ್ಥಿಗಳಿಗಾಗಿ ಮೀಸಲಾದ ಹುದ್ದೆಗಳು.

ಕ್ರ.ಸಂ.	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ/ಕೆಟಗರಿ
01	ಕನ್ನಡ	01	ಪರಿಶಿಷ್ಟ ಪಂಗಡ
02	ಸಮಾಜಶಾಸ್ತ್ರ	01	ಪರಿಶಿಷ್ಟ ಜಾತಿ
ಹೈ.ಕ.ಪ್ರದೇಶದ ಸ್ಥಳೀಯ ವೃಂದದ ಒಟ್ಟು ಹುದ್ದೆಗಳು		02	

ಷರತ್ತುಗಳು :

ವಿದ್ಯಾರ್ಹತೆ : ಅಭ್ಯರ್ಥಿಗಳು ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಅಥವಾ ತತ್ಸಮಾನ ಪದವಿಯಲ್ಲಿ ಕನಿಷ್ಠ ಶೇ 55% ಅಂಕಗಳನ್ನು ಪಡೆದಿರಬೇಕು (ಪ.ಜಾತಿ ಮತ್ತು ಪ.ಪಂಗಡಗಳ ಅಭ್ಯರ್ಥಿಗಳಿಗೆ ಶೇ 50%) ಮತ್ತು ಎನ್.ಇ.ಟಿ./ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿ.ಎಚ್.ಡಿ. ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ./ಎಸ್.ಎಲ್.ಇ.ಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿ.ಎಚ್.ಡಿ. ಪದವಿಯನ್ನು ಕೋರ್ಸ್‌ವರ್ಕ್‌ನೊಂದಿಗೆ ಪಡೆದಿರಬೇಕು. ಒಂದು ವೇಳೆ ದಿನಾಂಕ : 11–07–2009ರ ಪೂರ್ವದಲ್ಲಿ ಪಿ.ಎಚ್.ಡಿ. ಪದವಿ ಪಡೆದಿದ್ದಲ್ಲಿ/ಪಿ.ಎಚ್.ಡಿ. ಪದವಿ ನೋಂದಣಿ ಮಾಡಿಸಿದ್ದಲ್ಲಿ ಇಂತಹ ಅಭ್ಯರ್ಥಿಗಳು ದಿನಾಂಕ 04–05–2016ರ ಯು.ಜಿ.ಸಿ. ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟಿರುತ್ತದೆ. ದಿನಾಂಕ : 11–07–2009ರ ನಂತರದ ಯಾವುದೇ ನೇಮಕಾತಿಗೆ ಎಂ.ಫೀಲ್ ವಿದ್ಯಾರ್ಹತೆಗೆ ಪರಿಗಣಿಸಲಾಗುವುದಿಲ್ಲಾ.

ವಯೋಮಿತಿ : ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಒಳಗೆ ಇರಬೇಕು (ದಿನಾಂಕ : 20–06–2018ರ ಸರಕಾರದ ಆದೇಶ ಸಂಖ್ಯೆ : ಇಡಿ/49/ಯು.ಪಿ.ಸಿ./2018ರ ಪ್ರಕಾರ ಪ.ಜಾತಿ, ಪ.ಪಂಗಡ ಮತ್ತು ಕೆಟಗರಿ–1 ಗರಿಷ್ಠ 45, ವರ್ಷ ಮಿರಿರಬಾರದು.

ವಯೋಮಿತಿಯಲ್ಲಿ ವಿನಾಂಯಿತಿ : ಸರಕಾರದ ಆದೇಶ ಸಂಖ್ಯೆ : ಇಡಿ 87/ಯು.ಪಿ.ಸಿ/2016 ದಿನಾಂಕ : 13–12–2018ರ ಪ್ರಕಾರ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅವರು ಬೋಧನಾ ಅನುಭವ ಹೊಂದಿರುವ ಸೇವಾವಧಿ ಅಥವಾ 05 ವರ್ಷಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿ ಇರುತ್ತದೆ. ಅಭ್ಯರ್ಥಿಗಳ ಬೋಧನಾನುಭವದ ದಾಖಲೆಗಳನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಕಾಲೇಜು ಶಿಕ್ಷಣ ಆಯುಕ್ತರಿಂದ ದೃಢೀಕರಿಸಿದ ನಂತರ ಅಭ್ಯರ್ಥಿಗೆ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಗೆ ಪರಿಗಣಿಸಲಾಗುವುದು.

- ವೇತನ ಹಾಗೂ ವೇತನ ಶ್ರೇಣಿ ಯು.ಜಿ.ಸಿ. ಮತ್ತು ಕರ್ನಾಟಕ ಸರಕಾರದ ನಿಯಮದಂತೆ ಇರುತ್ತದೆ.
- ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ವಿದ್ಯಾರ್ಹತೆ, ಜಾತಿ, ಮೀಸಲಾತಿ 371(ಜೆ) ಹಾಗೂ ಸಂಬಂಧಪಟ್ಟ ಅವಶ್ಯಕ ದಾಖಲೆಗಳನ್ನು ಜೆರಾಕ್ಸ ಪ್ರತಿಯೊಂದಿಗೆ ಲಗತ್ತಿಸಿ **ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಪೀಪಲ್ಸ್ ಎಜ್ಯುಕೇಶನ ಸಂಸ್ಥೆ, ಕಲಬುರಗಿ** ಇವರ ಹೆಸರಿನಲ್ಲಿ ಎಸ್.ಸಿ., ಎಸ್.ಟಿ. ಅಭ್ಯರ್ಥಿಗಳು ರೂ. 500/– ಗಳ ಡಿ.ಡಿ. ಯೊಂದಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯ ಒಂದು ಪ್ರತಿಯನ್ನು **ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಕಲಬುರಗಿ** ಇವರಿಗೆ ಸಲ್ಲಿಸಬೇಕು.
- ಅರ್ಜಿಯನ್ನು ದಿನಾಂಕ : 23.06.2020 ರಂದು ಕಚೇರಿ ವೇಳೆಯೊಳಗಾಗಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಪೀಪಲ್ಸ್ ಎಜ್ಯುಕೇಶನ ಸೊಸೈಟಿ, ಡಾ. ಅಂಬೇಡ್ಕರ್ ಸಭಾಗೃಹ, ಪೊಲೀಸ್ ಮೈದಾನ ರಸ್ತೆ ಕಲಬುರಗಿ ಈ ವಿಳಾಸಕ್ಕೆ ಸಲ್ಲಿಸಬೇಕು.

ಸಹಿ/– ಪ್ರಧಾನ ಕಾರ್ಯದರ್ಶಿಗಳು,
ಕರ್ನಾಟಕ ಪೀಪಲ್ಸ್ ಎಜ್ಯುಕೇಶನ ಸೊಸೈಟಿ,
ಡಾ. ಅಂಬೇಡ್ಕರ್ ಸಭಾಗೃಹ, ಪೊಲೀಸ್ ಮೈದಾನ ರಸ್ತೆ, ಕಲಬುರಗಿ – 585 105